ಸಹಿಸಿಕೊಂಡೆ, ಇನ್ನೊಂದು ಪದರ
ಸುಲಿಯುವಾಗ ನೋವಿನ ತಳಮುಟ್ಟಿದೆ

ಮತ್ತೊಂದು ಪದರ ಸುಲಿದ
ಉರಿ ಕೆಂಡವಾಗಿ ದೇಹ ಧಾರಾಕಾರ ಕಣ್ಣೀರು
ಕೆನ್ನೆಯ ಮೇಲೆ.

ನನ್ನದೆ ಅಸ್ಪೃಶ್ಯತೆಯ ಕೊನೆಯ ಬೇನೆಯೆಂದು
ಅಗಿದು ನುಂಗಿಕೊಂಡೆ

ಜಿನುಗಲಾರಂಭಿಸಿತ್ತು ನೆತ್ತರು
ತೊಯ್ದ ದೇಹವನ್ನು ಕೇಳಿತು ನೆತ್ತರು
ಕ್ಷಮಿಸು, ಇದು ಕೊನೆಯದಾಗಿ.

ಬಿಡುವುದಿಲ್ಲ ಅವನು ಪರಮಪಾಪಿ
ಸುಲಿದೇಬಿಟ್ಟ

ಉತ್ತರಿಸಲಿಲ್ಲ ದೇಹ.

ಎದೆಯೊಳಗೆ, ಕೋಟಿ ಕೋಟಿ ಮಕ್ಕಳು ಅತ್ತ ಹಾಗೆ
ಉಮ್ಮಳಿಸಿತು ದುಃಖ ಕೊನೆಯ ಗುಟುಕಿನ ಹಾಗೆ
ತಣ್ಣಗಾಗಿತ್ತು ದೇಹ.

ನನ್ನ ಕಣ ಕಣವನ್ನು ಮುಟ್ಟಿದ್ದ
ಅವನು ಮುಟ್ಟಲೆಂದೆ ಜೀವ ಕೊಟ್ಟಿದ್ದೆ
ಸೋತುಹೋಗಿದ್ದವು ಅವನ ಕೈಗಳು.

ಕೂಗುತ್ತ ಹೋದ,
ಅಸ್ಪೃಶ್ಯ ಸತ್ತನೆಂದು.
ಮೆದುಳಲ್ಲಿ ಹೊತ್ತುಕೊಂಡು ಹೋದ,
ಉತ್ತುತ್ತ ಬಿತ್ತುತ್ತ ಲೋಕಕೆಲ್ಲ.

ಹೊಳೆಯುತ್ತಿದೆ, ಈಗಲೂ ಅಸ್ಪೃಶ್ಯತೆ
ನೆತ್ತರ ಆರದ ನೆಲವಾಗಿ...

